Reg No M 1229 Sd 3—3—1956

ಇನ್ನೂ ವರ್ಷ - 39th Year

ಸತ್ಯವಾದಿ

SATYAVADI

ಬಿಡಿ ಪ್ರತಿ 3 ಪೈ] ಸ್ಥಾಪಕರು : ಅರಮನೆ ಸರಸ್ಮೇದಾರ್ ಎಂ. ವಿ. ಸುಬ್ಬಾಯರ್

ಡಾ॥ ಜಾಕೀರ್ ಹುಸೇನ್ ನಿಧನ

ಅಂತ್ಯ ಮೆರವಣಿಗೆ ಮತ್ತು ಅಂತ್ಯ ಕ್ರಿಯೆ

ಬಹುಮಂದಿ ಅಂತ್ಯ ದರ್ಶನ ಪಡೆದು ಅಂತ್ಯಗೌರವ ಸಲ್ಲಿಸಿದರು

ವೈಸ್‌ರಾನ ಡಾಕ್ಟರ್ ಜಾಕೀರ್ ಹುಸೇನ್ ಅವರಾದ ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದವರು ನಿನ್ನೆ ಸಂಜೆ 6-30 ಕ್ಕೆ ಬೆಂಗಳೂರು ಅರಮನೆಯಲ್ಲಿ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ. ಮಹಾರಾಣಿಯವರ ನಿಧನದ ವಾರ್ತೆ ತಿಳಿದಕೂಡಲೇ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು, ಒಳಾಡಳಿತ ಮಂತ್ರಿ ಶ್ರೀ ಸಿದ್ದವೀರಪ್ಪನವರೂ, ವ್ಯವಸಾಯ ಮಂತ್ರಿ ಡಾ॥ ಸಾಗನಗೌಡರೂ ಅರಮನೆಗೆ ತೆರಳಿ ಅಂತ್ಯ ಗೌರವ ಸಲ್ಲಿಸಿದರು.

ಕಳೇಬರವು ಮೈಸೂರಿಗೆ ತರಲ್ಪಟ್ಟು ಬನ್ನೀಮಂಟಪದ ಹಳೇ ಉಕ್ಕಡದಿಂದ ಅಂತ್ಯ ಮೆರವಣಿಗೆಯು ಈ ಬೆಳಿಗ್ಗೆ ಸಕಲ ರಾಜಮರ್ಯಾದೆಗಳೊಡನೆ ನಡೆದು, ಮಧುವನದಲ್ಲಿರುವ ಡರ್ಬಷ್ಟ್ ತೋಟದಲ್ಲಿನ ರುದ್ರಭೂಮಿಯಲ್ಲಿ ಅವರ ಅಂತ್ಯಕ್ರಿಯೆಯು ವಿಧಿವತ್ತಾಗಿ ನೆರವೇರಿತು.

ಮಹಾಮಾತ್ಯಶ್ರೀ ಮಹಾರಾಣಿಯವರ ಅಂತ್ಯದರ್ಶನ ಪಡೆಯಲು ಅಬಾಲವೃದ್ಧರಾದಿಯಾಗಿ ದಾರಿಯುದ್ದಕ್ಕೂ ತುಂಬಾ ಜನ ಸೇರಿದ್ದರು ; ಮೆರವಣಿಗೆಯಲ್ಲಿ ಬಹಳ ಜನ ಭಾಗವಹಿಸಿದ್ದರು.

ಪೇಷಾವರ್ ಮಾ 1— ಅಫ್ಘಾನಿಸ್ತಾನ ಮತ್ತು ರಷ್ಯಾ ನಡುವೆ ವಿಮಾನ ಸಂಚಾರ ವ್ಯವಸ್ಥೆಯನ್ನು ಆರಂಭಿಸಲು ಸಲಹೆಯೊಂದನ್ನು ಚರ್ಚಿಸಿ ಕಾರ್ಯರೂಪಕ್ಕೆ ತರಲು ಸೋವಿಯಟ್ ವೈಮಾನಿಕ ನಿಯೋಗವೊಂದು ಕಾಬೂಲಿಗೆ ಆಗಮಿಸಿರುವುದಾಗಿ ಕಾಬೂಲು ರೇಡಿಯೋ ತಿಳಿಸಿದೆ

ನವದೆಹಲಿ ಮಾ 2— ಕಾಂಗ್ರೆಸ್ಸು ಪಾರ್ಲಿಮೆಂಟರಿ ಪಾರ್ಟಿಯು ಲೋಕಸಭೆಯ ಸ್ಪೀಕರು ಸ್ಥಾನಕ್ಕೆ ಡೆಪ್ಯುಟಿ ಸ್ಪೀಕರು ಶ್ರೀ ಅನಂತಶಯನಅಯ್ಯಂಗಾರರನ್ನು ಆರಿಸಿದೆ — ಚುನಾವಣೆಯು ಮಾರ್ಚ್ 8 ರಂದು ನಡೆಯುವುದು.

ಬಿವರು - ನೆತ್ತರ

ಜಲಂಧರ್ ಮಾ 2 — ಎಕರೆಗೆ 63 ಮಣ ಗೋಧಿಯನ್ನು ಬೆಳೆದ ಸ್ಪರ್ಧೆಯಲ್ಲಿ 1 ಸಾವಿರ ರೂಗಳ ಬಹುಮಾನವನ್ನು ಪಡೆದ ಸಿಂಗರು ತಮ್ಮ ವಿಜಯದ ರಹಸ್ಯ 'ಬಿವರು-ನೆತ್ತರ' ಗಳೆಂದು ತಿಳಿಸಿದರಂತೆ

ಮುಖ್ಯಮಂತ್ರಿಗಳ ಮೇಲೆ ರಾಜ್ಯಪಾಲರ ಆರೋಪ

ನವದೆಹಲಿ ಮಾ 2 — ರಾಜ್ಯಪಾಲಕರಾಗಲಿರುವ ರಾಜಪ್ರಮುಖರ ಸಮ್ಮೇಳನದಲ್ಲಿ ಮಧ್ಯಪ್ರದೇಶದ ರಾಜ್ಯಪಾಲಕ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ತಮ್ಮ ಸಂಸ್ಥಾನದಲ್ಲಿಗ್ಗೆ ತಾವು ಏನು ಹೇಳುವುದಕ್ಕೂ ಆಗದಿಲ್ಲವೆಂದೂ, ತಮ್ಮ ಸಂಸ್ಥಾನದ ಮಂತ್ರಿಗಳು ಏನನ್ನೂ ತಿಳಿಸುತ್ತಿಲ್ಲವೆಂದೂ ಏನಾದರೂ ತಿಳಿದುಕೊಳ್ಳಬೇಕಾದರೆ ವೃತ್ತಪತ್ರಿಕೆಗಳೇ ಆಧಾರವೆಂದೂ ಹೇಳಿರುವುದಾಗಿ ವರದಿಯಾಗಿದೆ.

ನಾಳೆಯ ಪಂಚಾಂಗ

ಆ॥ ಮಹಾವಿದ್ವಾನ್ ದೈವಜ್ಞಶಿರೋಮಣಿ ಸಂಪತ್ಕೃಷ್ಣಜೋಯಿಸರಿಂದ

4 ಭಾನುವಾರ ಅಷ್ಟಮಿ ಅನೂರಾಧ

ಮತದಾರರ ಪಟ್ಟಿಯಲ್ಲಿ ವರ್ಣೀಯರ ಬೇರ್ಪಡೆ

ಕೇಪ್‌ಟೌನ್ ಮಾ 2— ದಕ್ಷಿಣ ಆಫ್ರಿಕಾದ ಸರ್ವಸಾಮಾನ್ಯವಾದ ಮತದಾರರ ಪಟ್ಟಿಯಿಂದ 45 ಸಾವಿರ ಮಂದಿ ವರ್ಣೀಯು (ವಿಶೃಜಾತಿ) ಮತದಾರರುಗಳನ್ನು ತೆಗೆದುಹಾಕುವ ಕಾನೂನು ಗವರ್ನರ್-ಜನರಲ್ ಡಾ॥ ಅನ್ಸ್‌ಬ್ರೆಚ್ ಸಹಿ ಹಾಕಿದ ಅನಂತರ ಜಾರಿಗೆ ಬಂದಿತು.

ಬ್ರಿಟಿಷ್ ಅಧಿಕಾರಿಯ ಹತ್ಯೆ

ಅಮ್ಮಾನ್ ಮಾ 2 — ಅರಬ್ ಸೈನ್ಯದ ಶ್ರೇಷ್ಠ ಸೇನಾಧಿಕಾರಿಯಾಗಿದ್ದ ಬ್ರಿಟಿಷ್ ಜನರಲ್ ಜಾರ್ಜ್ ಗ್ಲಬ್‌ರನ್ನು ಅವರ ಕಛೇರಿಯಿಂದ ಬರುವಾಗ ಗುಂಡಿಟ್ಟು ಕೊಂದಿದ್ದಾರೆ.

---

100 ಅಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಾಳೆ ನಡೆಯುವ ಹೌಸಿಂಗ್ ಸೊಸೈಟಿ

ಡೈರೆಕ್ಟರುಗಳ ಚುನಾವಣೆಗೆ

ನಾವುಗಳು ಉಮೇದುವಾರರಾಗಿದ್ದೇವೆ.

ಮಾನ್ಯ ಸದಸ್ಯರು ದಯವಿಟ್ಟು ತಮ್ಮ ಅಮೂಲ್ಯ ಓಟುಗಳನ್ನು ಕೊಡಬೇಕೆಂದು ವಿನಂತಿ.

ನಂ. 20

ಹೆಚ್ ಎಸ್ ಚಂದ್ರಶೇಖರ್, ಬಿ ಎ
ಪ್ರತಿನಿಧಿ 'ಸತ್ಯವಾದಿ'

ನಂ. 23

ಎಂ ಎಸ್ ತಿಮ್ಮಯ್ಯ
ಪುರಸಭಾ ಸದಸ್ಯ, ಡೈರೆಕ್ಟರು ಸಿಟಿ ಕೊಆಪರೇಟಿವ್ ಸೊಸೈಟಿ

ನಂ. 24

ಡಾ॥ ಬಿ ಜಿ ದಾಸ್
ಪುರಸಭಾ ಸದಸ್ಯ

ನಂ. 35

ಎಂ ಎಸ್ ಪುಟ್ಟಲಿಂಗು
ಹಾಲಿ ಡೈರೆಕ್ಟರು ಮತ್ತು ಉಪಾಧ್ಯಕ್ಷ
ಸಿಟಿ ಕೊ. ಆ ಸೊಸೈಟಿ

ನಂ. 42

ಎಂ ಕೆ ಮುಕುಂದರಾವ್
ಸಹ-ಸಂಪಾದಕ, 'ಸತ್ಯವಾದಿ'

ನಂ. 56

ಕೆ ಎಂ ಆರ್ ವಿ ಶಾಸ್ತ್ರಿ, ಬಿ. ಎ.
ಸಂಪಾದಕ 'ಮೈಸೂರು ಪ್ರಭಾ'
ಮತ್ತು ಮಾಜಿ ಗೌ॥ ಕಾರ್ಯದರ್ಶಿ
ಕೃಷ್ಣರಾಜೇಂದ್ರ ಕೋ ಆ ಸೊಸೈಟಿ

ನಂ. 57

ಹೆಚ್ ಎಸ್ ಶ್ರೀಕಂಠಮೂರ್ತಿ
ಪ್ರತಿನಿಧಿ 'ಹಿಂದೂಸ್ಥಾನ್ ಸಮಾಚಾರ್'

ಶಾಲಾಮಾಡಲಿದೆ

ಕರ್ನೂಲು ಮಾ 2— ಆಂಧ್ರ ಅಸೆಂಬ್ಲಿಯಲ್ಲಿ ಮುಂದಿನ ಶಾಲಿನ ಬಡ್ಜೆಟ್ಟನ್ನು ಮಂಡಿಸಲಾಯಿತು — 3.24 ಕೋಟಿ ರೂ. ಖೋತಾ ಇದೆ — ಹೊಸ ತೆರಿಗೆಗಳಿಂದ 2.16 ಕೋಟಿ ವರಮಾನ ಅಧಿಕಿಸಿಕೊಳ್ಳಲಾಗುವದು — ಸರ್ಕಾರ ರೂ 6 ಕೋಟಿ ಶಾಲಾ ಎತ್ತಲಿದೆ.

ಶ್ರೀಮನ್ಮಹಾರಾಜರು ಗವರ್ನರ್

ನವದೆಹಲಿ ಮಾ 1 — ಜನರ ಅಭೀಷ್ಟದಂತೆ ಮೈಸೂರಿನ ಶ್ರೀಮನ್ಮಹಾರಾಜರವರೇ ನೂತನ ಮೈಸೂರು ರಾಜ್ಯದ ಪ್ರಥಮ ಗೌರ್ನರರಾಗುವರೆಂದು ಹೆಚ್ಚು ಕಮ್ಮಿ ನಿರ್ಧಾರವಾಗಿದೆ ; ನೂತನ ರಾಜ್ಯ ಬರುವ ಅಕ್ಟೋಬರು ೨ ನೇ ತಾ॥ ಜಾರಿಗೆ ಬರುವದೆಂದೂ, ಅಂದು ಶ್ರೀಮನ್ಮಹಾರಾಜರು ಗವರ್ನರರಾಗಿ ಅಧಿಕಾರ ವಹಿಸಿಕೊಳ್ಳುವರೆಂದೂ ನಿರೀಕ್ಷಿಸಲಾಗಿದೆ — ಬಳ್ಳಾರಿ ಮೈಸೂರಿನಲ್ಲೇ ಉಳಿಯುವುದು ; ಕರ್ನಾಟಕಕ್ಕೆ ಮೈಸೂರು ಎಂಬ ಹೆಸರೇ ಇರುವುದು.

ಮರಣ

ವಾರಂಗಾಲಿನಲ್ಲಿ ಪೋಲೀಸು ಠಾಣೆಯಲ್ಲಿ ಇಟ್ಟ ಬೆಂಕಿ ಬಾಂಬೊಂದು ಸಿಡಿದು ಹತ್ತು ಜನ ಪೋಲೀಸರು ಮಡಿದರೆಂದು ವರದಿಯಾಗಿದೆ.

ಅಂಗೀಕಾರ

ನವದೆಹಲಿ ಮಾ 2— ಭಾರತ-ಅಮೇರಿಕಾ ಸರ್ಕಾರಗಳು ಇಪ್ಪತ್ತಾರು ಮಿಲಿಯ ಡಾಲರುಗಳ ನೆರವಿನ ಐದು ಒಪ್ಪಂದಗಳಿಗೆ ಅಂಗೀಕಾರಮುದ್ರೆಯೊತ್ತಿದವು

× **ಮುಂಡ್ಯ** ಮಾ 2— ತಮ್ಮ ಬೇಡಿಕೆಗಳು ಪೂರ್ಣವಾಗದಿದ್ದಲ್ಲಿ ಮಾರ್ಚ್ 13 ರಿಂದ ಮುಷ್ಕರ ಹೂಡುವುದಾಗಿ ಘೋಷಿಸುತ್ತಾ, ಮೈಸೂರು ಸಕ್ಕರೆ ಕಂಪೆನಿ ಕಾರ್ಮಿಕರು ಇಂದು ಮಂಡ್ಯಕ್ಕೆ ಹೊಂಟಿದ್ದರು.

ಚಿಕ್ಕ ಚಾರಿತ್ರಿಕ ನಾಟಕ—

ಜೇಬುನ್ನೀಸಾ

(ಮುಂದುವರಿದುದು)

ಮೊಗಲ್ ಬಾದುಷಾ ಔರಂಗಜೇಬನ ರಹಸ್ಯಮಂದಿರ ; ಬಿಳಿಯ ಬಣ್ಣದ ಸಾಮಾನ್ಯ ಉಡುಪಿನೊಂದಿಗೆ, ಬಾದುಷಾ ಸ್ವಲ್ಪ ಕೋಪದೊಂದಿಗೆ ಕೋಣೆಯಲ್ಲಿ ಇಲ್ಲಿಂದಲ್ಲಿಗೆ ಶತಪಥಗಳನ್ನು ಹಾಕುತ್ತಾನೆ: ಕೋಣೆಯ ಗೋಡೆಗಳ ಮೇಲೆ ಮೊಗಲ್ ಬಾದಷಹರ ಚಿತ್ರಪಠಗಳು ಅವಿಷ್ಕರಿಸಲ್ಪಟ್ಟಿವೆ : ಇದ್ದಕ್ಕಿದ್ದಂತೆಯೇ ಬಾದುಷಾ ಗಂಟೆಯನ್ನು ಬಾರಿಸುತ್ತಾನೆ, ಕೂಡಲೇ ಬಾದುಷಾ ಅಂತರಂಗಿಕನಾದ ಹುಸೇನ್ ಪ್ರವೇಶಿಸುತ್ತಾನೆ.

ಹುಸೇನ್— (ಬಗ್ಗಿ ಸಲಾಂ ಮಾಡುತ್ತಾ) ಹುಜೂರ್ ಕ್ಯಾ ಹುಕುಂ ?

ಔರಂ— ಮಹಾಮಂತ್ರಿಯನ್ನು ನಮ್ಮ ಸನ್ನಿಧಾನಕ್ಕೆ ಕಳುಹಿಸು.

ಹುಸೇನ್— (ನಮ್ರತೆಯನ್ನು ಪ್ರದರ್ಶಿಸುತ್ತಾ) ಜೋಹುಕುಂ ಸರ್ಕಾರ್ (ಹಿಂದೆಹಿಂದಕ್ಕೆ ನಡೆಯುತ್ತಾ ಹೊರಟುಹೋಗುತ್ತಾನೆ)

[ಸ್ವಲ್ಪ ಸಮಯಾನಂತರ ಮಹಾಮಂತ್ರಿ ಹಸನಲ್ಲಿ ಪ್ರವೇಶಿಸುತ್ತಾನೆ]

ಹಸ— ಬಾದುಷಾರವರಿಗೆ ಜಯವಾಗಲಿ. (ಬಗ್ಗಿ ಸಲಾಂ ಮಾಡುತ್ತಾನೆ)

ಔರಂ— ಹಸನಲ್ಲೀ ! ಖೈದೀ.....

ಹಸ— ಎಲ್ಲಿರುವುದು ಕಂಡುಕೊಳ್ಳಲ್ಪಟ್ಟಿದೆ ; ಅಲಂಪನಾಹ್ ! ರಾಜ ಮೊಹರಿನೊಂದಿಗೆ ಖೈದಿಯ ಬಿಡುಗಡೆಗೆ ಫರ್ಮಾನಾ ಇಗೋ ಇಲ್ಲಿದೆ [ಫರ್ಮಾನಾವನ್ನು ಬಾದುಷಾರವರ ಕೈಗೆ ಕೊಡುತ್ತಾನೆ ; ಬಾದುಷಾರು ಫರ್ಮಾನಾವನ್ನು ಓದಿಕೊಳ್ಳುತ್ತಾರೆ)

ಔರಂ— ಯಾರದು ಈ ಸಾಹಸಕೃತ್ಯ ?

ಹಸ— ಮಾಶನಾಡದೆ ಬಿಪ್ಪನಂತೆ ನೋಡುತ್ತಿರುತ್ತಾನೆ.

ಔರಂ— ನಮ್ಮ ಸನ್ನಿಧಿಯಲ್ಲಿ ಸಂದೇಹವೇಕೆ ?

ಹಸ— ಮಾತನಾಡುವುದಿಲ್ಲ.

ಔರಂ— ಯಾರು ಈ ಫರ್ಮಾನಾವನ್ನು ತಲಪಿಸಿದ ನಮ್ಮಕ್ಕಹರಾಂ

ಹಸ— ರ....ಜಿ....ಯಾ (ಸಶೇಷ)

ಐ. ಟಿ. ಎಲ್. ಗ್ರೈಪ್ಸ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್

Protect the Cow ಗೋ ಸಂರಕ್ಷಣೆ ಮಾಡಿ

' ಗೋರಕ್ಷಣ ' ಪತ್ರಿಕೆಗೆ ಚಂದಾದಾರರಾಗಿರಿ ; ವಾರ್ಷಿಕ ಚಂದ 8 ಆಣೆ

ವುಡ್‌ಲ್ಯಾಂಡ್ಸ್ ಚಿತ್ರಮಂದಿರದಲ್ಲಿ

2—3—56 ನೇ ಶುಕ್ರವಾರದಿಂದ ಆಮೋಘ ಪ್ರಾರಂಭ

ತಾರಾಗಣ— ಭಗವಾನ್, ಶಶಿಕಲಾ, ಕೆ.ಶೋಭಾದೇವಿ, ಜ್ಯೋತಿ ಬಿಶ್ವಾಸ್ ಮೇತಾ ಸಂದ ನೃತ್ಯಗಳು, ಕರ್ಣಾನಂದ ಸಂಗೀತ ಆಶ್ಚರ್ಯಕರ ಡಂಗುಬಡಿಸುವ ಸನ್ನಿವೇಶಗಳಿಂದ ಕೂಡಿರುವ ಅತ್ಯಂತ ಮನರಂಜನೀಯ ಹಿಂದಿ ಚಿತ್ರ.

ದಿನವಹಿ 3 ಪ್ರದರ್ಶನ

ನ್ಯೂ ಅಪೆರಾ ಶ್ರೀ

ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲಾಗುತ್ತಿದೆ

ಆದರ್ಶ 10 ನೇ ವಾರ ಆದರ್ಶ ಸತಿ

ಪಾತ್ರ : ಆರ್. ನಾಗೇಂದ್ರರಾವ್, ಜಮುನ, ಜಾನಕಿ, ಮಾಲತಿ, ಮೋಹನ

ಮಹೋನ್ನತ ಕನ್ನಡ ಚಿತ್ರ [ದಿನ 3 ಆಟಗಳು]

— ಕರ್ನಾಟಕ ಫಿಲಂಸ್ ಹಂಚಿಕೆ — [ಪ್ರಭಾ ಪಬ್ಲಿಸಿಟಿ]

ಎಲ್ಲಾ ವಿಧವಾದ
ಆಯುರ್ವೇದ ಔಷಧಿಗಳಿಗೂ
ಆಶೋಕ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

ರಣಜಿತ್
ಈ ದಿವಸ
ಜಾ ಸೂ ಸ್ (ಹಿಂದಿ)

ಶಕ್ತಿಸುಧಾ

— ಉತ್ತಮ ಟಾನಿಕ್ —

Edited, Printed & Published by Dharma Prachara Nirata M. S Krishna Rao, at the Satyavadi Press, Chamrajpet, Mysore